# ಪಕ್ಷಿ ಕಾಶಿ ಜುರಾಂಗ್



**ಸಿಂಗಪುರದ ಈ ಪಕ್ಷಿಧಾಮದಲ್ಲಿ ವಿಶ್ವದ ಅಪರೂಪದ ಪಕ್ಷಿಗಳಿದ್ದು, ಧಾಮವನ್ನು ಹೊಕ್ಕಾಗ ಕಾಡು ಪ್ರವೇಶಿಸಿದ ಅನುಭವವಾಗುತ್ತದೆ.**

■ ಗೌರಿ ಚಂದ್ರಕೇಸರಿ

ರಾಂಗ್ ಬರ್ಡ್ ಪಾರ್ಕ್ ಸಿಂಗಪುರದ ಆಕರ್ಷಣೆಗಳಲ್ಲೊಂದು. ಅದು ಸಿಂಗಪುರದ ಪಶ್ಚಿಮ ಇಳಿಜಾರು ಪ್ರದೇಶದಲ್ಲಿರುವ ಜುರಾಂಗ್ ಎನ್ನುವ ಬೆಟ್ಟದಲ್ಲಿದೆ.

ಏಷ್ಯಾ ಖಂಡದಲ್ಲಿಯೇ ಅತ್ಯಂತ ದೊಡ್ಡದಾದ ಪಕ್ಷಿಧಾಮ ಎನ್ನುವ ಹೆಗ್ಗಳಿಕೆಯ ಈ ಖಗ ಉದ್ಯಾನ, ಸುಮಾರು 50 ಎಕರೆ ಪ್ರದೇಶಗಳಲ್ಲಿ ಹರಡಿಕೊಂಡಿದೆ. ಹಚ್ಚ ಹಸಿರಾದ ಈ ಧಾಮದಲ್ಲಿ 400 ಬಗೆಯ, 5000 ಪಕ್ಷಿಗಳಿವೆ. ಅತೀ ಅಪರೂಪ ಎನ್ನಿಸಿಕೊಂಡಿರುವ ಬಣ್ಣ ಬಣ್ಣದ ಗಿಳಿಗಳು, ಪೆಂಗ್ವಿನ್, ಫ್ಲೆಮಿಂಗೋ, ಪಾರಿವಾಳ, ಪೆಲಿಕಾನ್, ಹಾರ್ನ್‌ಬಿಲ್, ಬಾತುಕೋಳಿ, ಆಸ್ಟ್ರಿಚ್, ಎಮು, ಆಗಸದ ರಾಜ ಎನ್ನಿಸಿಕೊಂಡಿರುವ ದೈತ್ಯ ರಣಹದ್ದುಗಳು – ಹೀಗೆ ನಾನಾ ಬಗೆಯ ಪಕ್ಷಿಪ್ರಬೇಧಗಳನ್ನು ಜುರಾಂಗ್‌ನಲ್ಲಿ ಕಾಣಬಹುದು.

ಜುರಾಂಗ್ ಅತ್ಯಂತ ವ್ಯವಸ್ಥಿತವಾಗಿ ನಿರ್ಮಿಸಲಾದ ಪಕ್ಷಿಧಾಮ. ಒಳಗೆ ಪ್ರವೇಶಿಸುತ್ತಿದ್ದಂತೆಯೇ ಕಾಡಿನಲ್ಲಿ ಹೊಕ್ಕ ಅನುಭವವಾಗುತ್ತದೆ. ಸಾವಿರಾರು ಹಕ್ಕಿಗಳ ಕಲರವ ನಮ್ಮನ್ನು ಸ್ವಾಗತಿಸುತ್ತದೆ. ಅಲ್ಲಿ ಪಕ್ಷಿಗಳನ್ನು ಪಂಜರಗಳಲ್ಲಿ ಕೂಡಿಹಾಕದೆ ಸ್ವಚ್ಛಂದವಾಗಿ ಹಾರಾಡಿಕೊಂಡಿರಲು ಬಿಟ್ಟಿದ್ದಾರೆ. ಪಕ್ಷಿಗಳಿಗೆ ತಾವು ಬಂಧಿಗಳೆಂಬ ಭಾವನೆ ಕಿಂಚಿತ್ತೂ ಬರದಂತೆ ನೋಡಿಕೊಳ್ಳಲಾಗಿದೆ. ಅತ್ಯಂತ ಅಪಾಯಕಾರಿ ಎನಿಸಿರುವ ಪಕ್ಷಿಗಳನ್ನು ಮಾತ್ರ ಬೃಹತ್ ಪಂಜರಗಳಲ್ಲಿ ಇರಿಸಿದ್ದಾರೆ. ಪಾರ್ಕಿನ ಅಂಚಿನುದ್ದಕ್ಕೂ ತೆರೆದ ವಾಹನ (ಟ್ರಾಮ್ ರೈಡ್) ಸಂಚರಿಸುತ್ತದೆ, ಅದರಲ್ಲಿ ಕುಳಿತು ಪಕ್ಷಿವೀಕ್ಷಣೆ ಮಾಡಬಹುದು.

ಅಪರೂಪದ ಪಕ್ಷಿಗಳಾದ ಕ್ರೇನ್, ಆಸ್ಟ್ರಿಚ್, ಎಮು ಪಕ್ಷಿಗಳು ಅಲ್ಲಿವೆ. ಪೂರ್ವ ಏಷಿಯಾದ 200 ಪಕ್ಷಿಗಳನ್ನು ಪಂಜರಗಳಲ್ಲಿ ಇರಿಸಲಾಗಿದೆ. ಪಕ್ಷಿಧಾಮದ ಮಧ್ಯದಲ್ಲಿ ಲೋಹದ ಗ್ಯಾಲರಿ ಇದ್ದು, ಅದು ವಿಶ್ವದಲ್ಲಿಯೇ ಅತ್ಯಂತ ದೊಡ್ಡದಾದ, ಜನ ಸಂಚರಿ ಗ್ಯಾಲರಿ (ವಾಕ್ ಇನ್ ಫ್ಲೈಟ್ ಎವಿಯರಿ) ಎಂದು ಹೇಳಲಾಗುತ್ತದೆ. ಇಲ್ಲಿಂದ ಪಕ್ಷಿಧಾಮದ ವಿಹಂಗಮ ನೋಟ ಸಾಧ್ಯ.

ಪೆಂಗ್ವಿನ್ ಪಕ್ಷಿಗಳಿಗಾಗಿ ಹಿಮದಿಂದ ಆಚ್ಛಾದಿತವಾದ ಕೃತಕ ಸರೋವರವೊಂದನ್ನು ನಿರ್ಮಿಸಲಾಗಿದೆ. 17 ಸಾವಿರ ಚದರ ಅಡಿ ಇರುವ ಈ ಭಾಗಕ್ಕೆ ಗಾಜಿನ ಗೋಡೆಯನ್ನು ಅಳವಡಿಸಿದ್ದಾರೆ. ಇದರ ಮೂಲಕ ಪೆಂಗ್ವಿನ್‌ಗಳನ್ನು ನೋಡಿದಾಗ ನಾವು ಹಿಮಪ್ರದೇಶದಲ್ಲಿರುವಂತೆ ಭಾಸವಾಗುತ್ತದೆ. ಇನ್ನೊಂದು ಭಾಗದಲ್ಲಿ ನಿಶಾಚರಿ ಪಕ್ಷಿಗಳನ್ನು ಇರಿಸಲಾಗಿದ್ದು, ಆ ಭಾಗವು ಹಗಲಿನಲ್ಲೂ ಕತ್ತಲಿಂದ ಕೂಡಿದ್ದು, ರಾತ್ರಿಯಲ್ಲಿ ಬೆಳಗಿನಂತೆ ಇರುವ ತಾಂತ್ರಿಕತೆಯನ್ನು ಅಳವಡಿಸಿದ್ದಾರಂತೆ. ಆದರೆ ಕಳೆದ ವರ್ಷದಿಂದ ಆ ಭಾಗದ ವೀಕ್ಷಣೆಗೆ ಅವಕಾಶವಿಲ್ಲ.







ಪೆಲಿಕನ್(ನೀರು ಕೋಳಿ)ಗಳಿಗಾಗಿ ನೀರಿನ ಒಳಗಡೆ ಗುಹೆಗಳಿಂದ ಕೂಡಿದ ಕೃತಕ ಕೊಳವಿದೆ. ಆ ರೀತಿಯಲ್ಲಿ ನೀರಿನೊಳಗಿನ ಪಕ್ಷಿ ಪೋಷಣೆಯು ವಿಶ್ವದಲ್ಲಿಯೇ ಪ್ರಥಮ ಎನ್ನಲಾಗಿದೆ. ಉದ್ದ, ನೀಳ ಕಾಲುಗಳ ಸುಂದರ ಫ್ಲೆಮಿಂಗೋ ಪಕ್ಷಿಗಳ ಹಿಂಡನ್ನು ನೋಡುವುದೇ ಒಂದು ಆನಂದ. ಅವು ಕೊಳದಲ್ಲಿ ತಮ್ಮ ಮುಖವನ್ನು ಹುದುಗಿಸಿ ಮೀನನ್ನು ಕಚ್ಚಿ ತಿನ್ನುವುದನ್ನು ಅಲ್ಲಿ ಕಾಣಬಹುದು.

ವಿಶ್ವದ ಅತಿ ಎತ್ತರದ ಮಾನವ ನಿರ್ಮಿತ ವಾಟರ್ ಫಾಲ್ಸ್ ಅಲ್ಲಿದೆ. 35 ಮೀಟರ್ ಎತ್ತರದಿಂದ ಇಲ್ಲಿ ಜಲಧಾರೆ ಧುಮ್ಮಿಕ್ಕುತ್ತದೆ. ಪ್ರವಾಸಿಗರ ಮನರಂಜನೆಗೆ ಪಕ್ಷಿಗಳ ಶೋಗಳು ಕೂಡ ಅಲ್ಲಿ ನಡೆಯುತ್ತವೆ. ಸಾಹಸ ಪ್ರದರ್ಶನ ಮಾಡುವ ಹಾರ್ನ್‌ಬಿಲ್‌ಗಳು, ಮಾತನಾಡುವ ಗಿಳಿಗಳು ಆ ಕಾರ್ಯಕ್ರಮಗಳ ವಿಶೇಷ.

ಜುರಾಂಗ್ ಪಕ್ಷಿಧಾಮದಲ್ಲಿ ಪಕ್ಷಿ ಸಂಶೋಧನಾ ಕೇಂದ್ರ, ಪಕ್ಷಿ ಶುಶ್ರೂಷಾ ಕೇಂದ್ರ, ಹಾಗೂ ಇನ್‌ಕ್ಯುಬೇಟ್ ಕೇಂದ್ರಗಳಿದ್ದು, ಪ್ರತಿ ವರ್ಷ ಸುಮಾರು 150 ಮೊಟ್ಟೆಗಳಿಂದ ಮರಿಗಳನ್ನು ಮಾಡಲಾಗುತ್ತದೆ. ಆ ಪಕ್ಷಿಧಾಮವನ್ನು ವೀಕ್ಷಿಸಲು ಕನಿಷ್ಠ ಐದು ಗಂಟೆಯಾದರೂ ಬೇಕು. ■